ಗತಿ ಏನಾಗಬಹುದು? ಎನ್ನುವ ಯಾವ ಪ್ರಶ್ನೆಗಳಿಗೂ ಅವಳು ಸೊಪ್ಪು ಹಾಕಲಿಲ್ಲ.

ಅದೊಂದು, ಹೌಸಿಂಗ್ ಕಾಲೋನಿಯಿಂದ ಬಹಳ ದೂರದಲ್ಲಿರುವ, ಯಾವುದೊ ಕಾಲದ, ಇನ್ನು ಕಟ್ಟಬೇಕಾಗಿರುವ, ಒಂದೆ ರೀತಿಯಲ್ಲಿ ಅಚ್ಚು ಹಾಕಿದಂತಹ ಮನೆಗಳಿಗಾಗಿ ಕಾದುಕುಳಿತಿರುವ ಪಾಳುಭೂಮಿ.

ನೀಲನಕ್ಷೆ ನೋಡಿ ಕೆಲಸದವರು ನಗುವನ್ನು ಮರೆಸಿಟ್ಟುಕೊಂಡರು. ಅವಳ ಮುಖವನ್ನೂ ಪ್ಲಾನನ್ನೂ ಬದಲಿಸಿ ಬದಲಿಸಿ ನೋಡಿದರು.

ಆಫೀಸಿನಲ್ಲಿ ಕೆಲಸದ ನಡುವಿನ ಅವಸರದಲ್ಲಿದ್ದ ಗಂಡ, ಬ್ಲಾಂಕ್ ಚೆಕ್ಕಿಗೆ ದಸ್ಕತ್ತು ಹಾಕಿ ಅವಳಿಗೆ ಎಲ್ಲವನ್ನೂ ವಹಿಸಿಕೊಟ್ಟ.

ಕೊನೆಗೆ ಹೊಸಮನೆಯೊಳಗೆ ಹೊಸ ಪರಿಮಳಗಳು ಮಾತ್ರವೆ ನೆಲೆಯೂರುವಂತಹ ಒಂದು ಸಂಜೆಯ ಸಮಯದಲ್ಲಿ ಅವರು ಗೃಹಪ್ರವೇಶದ ಕಾರ್ಯಕ್ರಮ ನೆರವೇರಿಸಿದರು.

ಮಲಗುವ ಕೋಣೆ ಲೆಕ್ಕಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ದೊಡ್ಡದಾಗಿರುವುದರಿಂದ ಅದರ ಸುರಕ್ಷತೆಗೆ ನಷ್ಟ ಉಂಟಾಯಿತೆನೋ ಎನ್ನುವ ಒಂದೇ ಒಂದು ಅಭಿಪ್ರಾಯವನ್ನು ಮಾತ್ರ ಗಂಡ ವ್ಯಕ್ತಪಡಿಸಿದ. ಉಳಿದಂತೆ ಅವಳಂದುಕೊಂಡ ಎಲ್ಲ ವಿಚಾರಗಳೂ ಒಪ್ಪಿಗೆಯಾದವು.

ಆಯ್ಕೆಮಾಡಿದ್ದ ಬಣ್ಣಗಳು, ಕರ್ಟನುಗಳು, ಪೀಠೋಪಕರಣಗಳು, ಅಡಿಗೆಮನೆಯ ಸಾಮಾಗ್ರಿಗಳು ಎಲ್ಲವೂ ಬಹಳ ಉತ್ತಮವಾಗಿದ್ದವು.

ಅವಳು ಉತ್ಸಾಹದಿಂದ ಎಲ್ಲವನ್ನೂ ಕೇಳಿದಳು. ಎಚ್ಚರಗೊಂಡಿದ್ದ ಮನಸ್ಸು ಅಂದು ನಿದ್ರಿಸಲು ಆಶಿಸಲಿಲ್ಲ.

ಬಹುಶಃ ಸ್ಥಳ ಬದಲಾಗಿದ್ದರಿಂದ ನಿದ್ರೆ ಬಂದಿಲ್ಲವೇನೊ ಎಂದು ಅವಳು ತನ್ನಷ್ಟಕ್ಕೆ ಸಮಾಧಾನ ಮಾಡಿಕೊಂಡಳು.

ಪೂರ್ವದ ಬೆಟ್ಟದ ತಪ್ಪಲುಗಳಿಂದ ಬೀಸಿದ ಗಾಳಿಯು, ಕಳೆದು ಹೋಗಿದ್ದ ದಿನಗಳ ನೆನಪುಗಳೊಂದಿಗೆ ಬಂದಿತು. ಉಪ್ಪಿನ ಕಲ್ಮಶವಿಲ್ಲದ, ಮೀನಿನ ದುರ್ಗಂಧವಿಲ್ಲದ ಗಡಸಾದ ಬೆಟ್ಟದ ಗಾಳಿ.

ಗಂಡ ಹೇಳಿದ:

"ಓ... ಎಂತಹ ತಂಪು!"

ಅವಳು ಎದ್ದು ಎಲ್ಲ ಕಿಟಕಿಗಳ ಬಾಗಿಲುಗಳನ್ನು ಮುಚ್ಚಿದಳು.

ಅವಳ ಸಮೀಪಕ್ಕೆ ಬಂದು ಆತ ಹೇಳಿದ:

"ನೀನಿವತ್ತು ತಣ್ಣೀರಿನಲ್ಲಿ ಸ್ನಾನ ಮಾಡಿದೆಯಲ್ಲವೇ?..."

"ನಾನು ದಿನವೂ ತಣ್ಣೀರಿನಲ್ಲಿ ತಾನೆ ಸ್ನಾನ ಮಾಡೋದು!"

"ಐಸನ್ನು ಮುಟ್ಟಿದ ಅನುಭವ ನಿನ್ನ ಶರೀರ."

ತಣ್ಣನೆಯ ನಿಶ್ಶಬ್ದದಲ್ಲಿ ಅವಳ ನಗು ಆಲಿಕಲ್ಲುಗಳ ಮಳೆ ಸುರಿಸಿತು. ಬಿಸಿಯನ್ನು ಬಂಧಿಸಿಟ್ಟು ಆತ ನಿದ್ರೆಯನ್ನು ಧ್ಯಾನಿಸುತ್ತಾ ಮಲಗಿದ. ಅಂದು ಮೊದಲಬಾರಿಗೆ ನಿದ್ರೆಯೇನೆಂದು ಆತನಿಗೆ ಗೊತ್ತಾಯಿತು. ತಂಪೆನ್ನುವುದು ಬೆಂಕಿಯೆಂದೂ ಗೊತ್ತಾಯಿತು.

ಬೆಳಕು ಹರಿಯುವುದಕ್ಕೂ ಮೊದಲು ಬಿಸಿನೀರಿನಲ್ಲಿ ಸ್ನಾನ ಮಾಡಿದ. ಬೆಳಗಿನ ಬಿಸಿತಿಂಡಿ ತಿಂದು ಆತ ತನ್ನ ಪ್ರಿಯತಮೆಗೆ ಹೇಳಿದ:

"ಶ್ಯಾಮಲೇ, ಇವತ್ತು ನಾನು ಬರೋದಿಲ್ಲ. ಇವತ್ತು ಟೂರ್ ಇದೆ. ನಾಳೆನೂ!"

"ಹಾಗಾದ್ರೆ ನಾನು?"